# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂ. | 480 |
| ಮಾನ್ಯ ಸದಸ್ಯರ ಹೆಸರು | ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 11.12.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಕೆ.ಆರ್ ಪುರಂ ವಿಧಾನಸಭಾ ವ್ಯಾಪ್ತಿಯ ಮೆಡ ಹಳ್ಳಿ ಗ್ರಾಮದ ಸರ್ವೆ ನಂ:59 ರಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡದಲ್ಲಿ ಸಿ.ಆರ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಹೆಸರಿನಲ್ಲಿ ಸಿಎಲ್-7 ಸನ್ನದನ್ನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಬೆಂಗಳೂರು ನಗರ ಜಿಲ್ಲೆ-2 ಕೆ.ಆರ್ ಪುರಂ ವ್ಯಾಪ್ತಿಯ ಅಬಕಾರಿ ನಿರೀಕ್ಷಕರು ಸುಳ್ಳು ದಾಖಲೆಗಳ ವರದಿಯನ್ನು ಸಂಬಂಧಪಟ್ಟ ಅಬಕಾರಿ ಉಪ ಅಧೀಕ್ಷಕರು ಉಪ ವಿಭಾಗ 03 ಬೆಂಗಳೂರು ನಗರ ಜಿಲ್ಲೆ-2 ಬೆಂಗಳೂರು ರವರಿಗೆ ದಿನಾಂಕ:12-03-2025 ರಂದು ಮೆಡ ಹಳ್ಳಿ ಬಿದರಳ್ಳಿ ಹೋಬಳಿ ಕೆ.ಆರ್ ಪುರಂ ಬೆಂಗಳೂರು ಇವರಿಗೆ 2024-25 ನೇ ಸಾಲಿಗೆ ಹೊಸದಾಗಿ ಸಿಎಲ್-7 ಸನ್ನದನ್ನು ಮಂಜೂರು ಮಾಡುವಂತೆ ವರದಿ ಸಲ್ಲಿಸಿ ವಲಯ ಅಬಕಾರಿ ನಿರೀಕ್ಷಕರು ಅಧಿಕಾರ ದುರುಪಯೋಗ ಪಡಿಸಿಕೊಂಡ ಬಗ್ಗೆ ಸಾರ್ವಜನಿಕರು ಸರ್ಕಾರಕ್ಕೆ ಮತ್ತು ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ಸದರಿ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತಿನ ಕ್ರಮ ಕೈಗೊಳ್ಳಲು ದೂರು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಗಮನಕ್ಕೆ ಬಂದಿರುತ್ತದೆ. |

| | | |
|---|---|---|
| ಆ) | ಬಂದಿದ್ದಲ್ಲಿ ಸದರಿ ವಲಯ ಅಬಕಾರಿ ನಿರೀಕ್ಷಕರ ವಿರುದ್ಧ ಕೈಗೊಂಡ ಶಿಸ್ತಿನ ಕ್ರಮವೇನು; ಇದುವರೆಗೂ ಸದರಿ ಅಧಿಕಾರಿಯು ಸುಳ್ಳು ದಾಖಲೆಗಳ ವರದಿ ಸಲ್ಲಿಸಿ ಕರ್ತವ್ಯ ಲೋಪ ಮತ್ತು ದುರ್ನಡತೆ ಪ್ರದರ್ಶಿಸಿದ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು; | ಮೆ\|\| ಸಿ.ಆರ್ ಬೋರ್ಡಿಂಗ್ ಅಂಡ್ ಲಾಡ್ಜಿಂಗ್, ಪಾಲುದಾರರು (ಕಿರಣ್.ಸಿ.ಕೆ, ಬಿ.ಶೇಖರ್, ಮತ್ತು ನಿತಿನ್.ಕೆ.ಋತಿಕ್) ಇವರು ಮನವಿ ಸಲ್ಲಿಸಿ ಸರ್ವೆ ನಂ.59, ಮೇಡಹಳ್ಳಿ ವಿಲೇಜ್, ಬಿದರಹಳ್ಳಿ ಹೋಬಳಿ, ಬೆಂಗಳೂರು ಇಲ್ಲಿಗೆ ಎಂ.ಪಿ ಕೋದಂಡರಾಮಯ್ಯ ಇವರ ಮಾಲೀಕತ್ವದ ಕಟ್ಟಡಕ್ಕೆ 2024-25ನೇ ಸಾಲಿಗೆ ಹೊಸದಾಗಿ ಸಿಎಲ್-7 ಸನ್ನದು ಮಂಜೂರು ಮಾಡಲು ಅಬಕಾರಿ ನಿಯಮಗಳನುಸಾರ ನಿಯಮಗಳು ಉಲ್ಲಂಘನೆ ಮಾಡಿ ಸನ್ನದನ್ನು ಮಂಜೂರು ಮಾಡಿರುವುದಾಗಿ ಅಬಕಾರಿ ನಿರೀಕ್ಷಕರು, ಕೆ.ಆರ್. ಪುರಂ ವಲಯ, ಮತ್ತು ಅಬಕಾರಿ ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ -2 ರವರ ವಿರುದ್ಧ (1) ಡಾ ಹರಿಪ್ರಸಾದ್ , ವಕೀಲರು, ನಂ. 167, ವಿಜಯನಗರ , ಬೆಂಗಳೂರು ಮತ್ತು (2) ಶ್ರೀ ಅರುಣ್ ಕುಮಾರ್ ಕೆ. ಸಂಸ್ಥಾಪಕ ರಾಜ್ಯಾಧ್ಯಕ್ಷಕರು, ಸಮತಾ ಸ್ವಾಬಿಮಾನಿ ದಳ, ಬೆಂಗಳೂರು ರವರುಗಳು ದೂರುಗಳನ್ನು ಸಲ್ಲಿಸಿರುತ್ತಾರೆ.<br><br>ಅರ್ಜಿದಾರರಿಗೆ ಈ ಸಂಬಂಧ ಸಿಎಲ್-7 ಸನ್ನದು ಮಂಜೂರು ಮಾಡಿರುವುದು ನಿಯಮಗಳನುಸಾರ ಇರುವುದಾಗಿ ಸೂಕ್ತ ಹಿಂಬರಹ ನೀಡಲಾಗಿರುತ್ತದೆ. |
| ಇ) | ಸದರಿ ಅಧಿಕಾರಿಯು ಸುಳ್ಳು/ನಕಲಿ ದಾಖಲೆಗಳನ್ನು ಸೃಷ್ಟಿಸಿ ಗಂಭೀರ ಸ್ವರೂಪದ ಕರ್ತವ್ಯಲೋಪ ಮತ್ತು ದುರ್ನಡತೆ ಪ್ರದರ್ಶಿಸಿರುವುದರಿಂದ ಪ್ರಸ್ತುತ ಹುದ್ದೆಯಲ್ಲಿ ಸ್ಥಳದಲ್ಲಿ ಮುಂದುವರೆಸಿದರೆ, ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾಶಪಡಿಸಲು ಮತ್ತು ಸಾಕ್ಷಿದಾರರ ಮೇಲೆ ಪ್ರಭಾವ ಬೀರುವ ಸಂಭವವಿರುವುದರಿಂದ ಸದರಿ ಅಧಿಕಾರಿಯನ್ನು ಕೂಡಲೆ ಸೇವೆಯಿಂದ ಅಮಾನತ್ತುಗೊಳಿಸಿ ಕಠಿಣ ಕ್ರಮ ಕೈಗೊಳ್ಳಲಾಗುವುದೇ? | ಮಂಜೂರು ಮಾಡಲಾಗಿರುವ ಸನ್ನದು ಅಬಕಾರಿ ಕಾಯ್ದೆ/ ನಿಯಮಗಳಿಗೆ ಅನುಸಾರವಾಗಿರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ವಹಿಸುವ ಪ್ರಮೇಯ ಉದ್ಭವಿಸುವುದಿಲ್ಲ. |

**ಆಇ 95 ಇಎಲ್‌ಕ್ಯೂ 2025**

(ಆರ್.ಬಿ.ತಿಮ್ಮಾಪುರ)
**ಅಬಕಾರಿ ಸಚಿವರು**